ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ
E-mail : kannadapostnews@gmail.com / ಕನ್ನಡ post
Price: ₹1
Vol.No.01 | Issue. 292 | Pages. 2 | Date: 12-10-2025, SUNDAY
RNI NO: KARKAN/2024/89601
Kannada Daily
ಸಂಪುಟ : 01 - ಸಂಚಿಕೆ : 292 - ಪುಟಗಳು : 2 12-10-2025 ಭಾನುವಾರ
Ph: 8762954248
ದರ : ₹1

# ಕನ್ನಡ ಪೋಸ್ಟ್

# ಹಾಸನಾಂಬ 3ನೇ ದಿನ: 1.20 ಲಕ್ಷ ಭಕ್ತರ ದರ್ಶನ

## ರಜಾ ದಿನ ಹರಿದುಬಂದ ಭಕ್ತ ಸಾಗರ! : ಟಿಕೆಟ್ ಮಾರಾಟದಿಂದ 1 ಕೋಟಿ ರೂ. ಆದಾಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಕ್ತಿದೇವತೆ ಹಾಸನಾಂಬ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಮೂರನೇ ದಿನವಾದ ಶನಿವಾರ ಸಾರ್ವಜನಿಕ ದರ್ಶನ ಸಾಂಗವಾಗಿ ನಡೆದಿದ್ದು 1 ಲಕ್ಷ ಭಕ್ತರು ದೇವಿ ದರ್ಶನ ಪಡೆದಿದ್ದಾರೆ.

ಶನಿವಾರ ಬೆಳಿಗ್ಗೆಯಿಂದಲೇ ಸರದಿ ಸಾಲಿನಲ್ಲಿ ಭಕ್ತರು ಬಂದರು. ಅದೇ ರೀತಿ ಸಾವಿರ ರೂ., 300 ರೂ. ಮತ್ತು ಗೋಲ್ಡನ್ ಪಾಸ್ ಮೂಲಕ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದರು. ಸಾಮಾನ್ಯ ಭಕ್ತರು ಮಾತ್ರವಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಚಾಮರಾಜನಗರ ಸಂಸದ ಸುನಿಲ್ ಬೋಸ್, ಬಿಜೆಪಿ ಶಾಸಕ ಅರವಿಂದ ಬೆಲ್ಲದ್ ಸೇರಿದಂತೆ ಅನೇಕ ಗಣ್ಯರು ಹಾಸನಾಂಬ ದರ್ಶನ ಪಡೆದರು.



> ಹಾಸನಾಂಬ ಮಹೋತ್ಸವದಲ್ಲಿ ಈ ಬಾರಿ ಆದಾಯ ಕುಸಿಯಬಹುದು. ನಮಗೆ ಅದು ಮುಖ್ಯವಲ್ಲ. ಸಾಮಾನ್ಯ ಭಕ್ತರು ಶಾಂತವಾಗಿ ದರ್ಶನ ಮಾಡಿದರೆ ಅದು ನಮ್ಮ ಸಾರ್ಥಕತೆ. ಸರ್ಕಾರಕ್ಕೆ ದೇವಾಲಯ ದುಡ್ಡಿನ ಮೇಲೆ ಆಸೆಯಿಲ್ಲ.
>
> **- ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ**

### ಸಾಮಾನ್ಯರ ಅಭಿಪ್ರಾಯ ಆಲಿಸಿದ ಸಚಿವ

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತರ ಬಳಿಗೆ ತೆರಳಿ ವ್ಯವಸ್ಥೆ ಕುರಿತು ಅಭಿಪ್ರಾಯ ಪಡೆದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಮಾತನಾಡಲು ನಿಲ್ಲುವುದಕ್ಕೆ ಆಗದ ರೀತಿ ಲೈನ್ ಮುಂದೆ ಸಾಗುತ್ತಿದೆ. ಅಷ್ಟು ಸರಾಗವಾಗಿ ದರ್ಶನ ಕಾರ್ಯಕ್ರಮ ನಡೆಯುತ್ತಿರುವುದು ಬಹಳ ಸಂತೋಷವಾಗುತ್ತಿದೆ. ಅರ್ಧ ದಿನದ ದರ್ಶನದಲ್ಲಿ 91 ಸಾವಿರ ಜನ ಅತೀ ಕಡಿಮೆ ಅವಧಿಯಲ್ಲಿ ದರ್ಶನ ಪಡೆದುಕೊಂಡು ಹೋಗುತ್ತಿದ್ದಾರೆ ಎಂದರೆ ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ನಾವು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಸೇರಿಕೊಂಡು ಕೆಲವು ಬದಲಾವಣೆಗಳನ್ನು ಮಾಡಿದ್ದೇವೆ. ಅದನ್ನು ಜಿಲ್ಲಾಡಳಿತ ಸಮರ್ಪಕವಾಗಿ ಅನುಷ್ಠಾನ ಮಾಡಿರುವುದಕ್ಕೆ ಸಾರ್ಥಕತೆ ಆಗಿದೆ. ಎಲ್ಲೋ ಒಂದು ಕಡೆ ಶ್ರೀ ಸಾಮಾನ್ಯರಿಗೆ ಚೆನ್ನಾಗಿ ದರ್ಶನ ಆಗುತ್ತಿದೆ ಎಂದರೆ ಅದು ನಮಗೆ ಬಹಳ ಸಂತೋಷದ ಸಂಗತಿ ಎಂದು ತಿಳಿಸಿದರು.

ಹಾಸನದ ಸ್ಥಳೀಯರಿಗೆ ನಮ್ಮ ಊರಿನ ದೇವರ ದರ್ಶನ ಮಾಡಲು ನಮಗೆ ಅವಕಾಶವಿಲ್ಲ ಎನ್ನುವ ಆತಂಕವಿತ್ತು. ಆದರೆ ಇಂದು ಸ್ಥಳೀಯರು ಕೂಡಾ ಆರಾಮಾಗಿ ದರ್ಶನ ಮಾಡಿಕೊಂಡು ಹೋಗುತ್ತಿದ್ದಾರೆ. ಗಣ್ಯರಿಗೂ ಸರಾಗವಾಗಿ ದರ್ಶನ ನಡೆಯುತ್ತಿದೆ ಎಂದರು.

ನಿಯಮದಲ್ಲಿ ಬದಲಾವಣೆ ತಂದಾಗ ಆತಂಕವಿತ್ತು. ಆದರೆ ಮೊದಲನೇ ದಿನ ಸರಾಗವಾಗಿ ದರ್ಶನ ಕಾರ್ಯಕ್ರಮ ನಡೆಯಿತು. ಎರಡನೇ ದಿನ ಶನಿವಾರ ಎರಡುಪಟ್ಟು ಜನ ಬರುತ್ತಾರೆಂಬ ಆತಂಕವಿತ್ತು. ಎರಡು ಪಟ್ಟು ಜನ ಬಂದಿದ್ದರೂ ಕೂಡ ವೇಗವಾಗಿ ದರ್ಶನವಾಗಿದೆ ಯಾವುದು ವ್ಯತ್ಯಾಸವಾಗಿಲ್ಲ ಎಂದರು.

### ಸಮಸ್ಯೆ ಪರಿಹಾರಕ್ಕೆ ಕ್ರಮ

ಶೌಚಾಲಯದ ಸಮಸ್ಯೆ ಸೇರಿದಂತೆ ಸಣ್ಣ ಪುಟ್ಟ ಸಮಸ್ಯೆಗಳಾಗಿವೆ ಎಂದು ದೂರುಗಳು ಬಂದಿದ್ದವು. ಖುದ್ದು ನಾನೇ ಹೋಗಿ ಶೌಚಾಲಯಗಳ ವೀಕ್ಷಣೆ ಮಾಡಿ ಬಂದಿದ್ದೇನೆ ಎಲ್ಲವೂ ಚೆನ್ನಾಗಿವೆ. ಅವರಿಗೂ ಯಾವುದೇ ವ್ಯತ್ಯಾಸವಾಗದಂತೆ ಸ್ವಚ್ಛವಾಗಿಡಿ ಎಂದು ತಿಳಿಸಿದ್ದೇನೆ ಎಂದರಲ್ಲದೆ, ಬ್ಯಾರಿಕೇಡ್‌ಗೆ ಹಾಕಿರುವ ಪಟ್ಟಿಯಿಂದ ಎಡವಿ ಗಾಯಗಳಾಗುತ್ತಿವೆ ಎಂದು ದೂರು ಕೇಳಿ ಬಂದಿತ್ತು. ಆ ಹಿನ್ನೆಯಲ್ಲಿ ರಾತ್ರೋ ರಾತ್ರಿ ಜಿಲ್ಲಾಡಳಿದವರು ಆ ಪಟ್ಟಿಗೆ ಬಟ್ಟೆಯನ್ನು ಸುತ್ತಿ ಗಾಯ ಆಗದಂತೆ ತಡೆದಿದ್ದಾರೆ. ಬರುವಂತಹ ಸಾರ್ವಜನಿಕರಿಗೆ ಯಾವುದೇ ರೀತಿ ತೊಂದರೆಯಾಗದಂತೆ ನೋಡಿಕೊಳ್ಳಲು ಬದ್ಧರಿದ್ದೇವೆ ಎಂದರಲ್ಲದೆ ರಾಜ್ಯ ಹಾಗೂ ದೇಶಾದ್ಯಂತ ಜನ ಬಂದು ದರ್ಶನ ಪಡೆಯಲಿ ಎಂದರು.

## ಅಚ್ಚುಕಟ್ಟು ವ್ಯವಸ್ಥೆಗೆ ಮನಸೋತ ಸಚಿವ

ಹಾಸನಾಂಬ ಜಾತ್ರಾ ಮಹೋತ್ಸವಕ್ಕಾಗಿ ಕೈಗೊಂಡಿರುವ ಕ್ರಮಗಳ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಹಾಸನಾಂಬ ಜಾತ್ರಾ ಮಹೋತ್ಸವ ಬಹಳ ವಿಶಿಷ್ಟವಾಗಿ ನಡೆಯುತ್ತಿದೆ. ಯಾವುದೇ ತೊಂದರೆಯಾಗದಂತೆ ಬಹಳ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಅ.15 ರಂದು ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯ ಮೊದಲ ಸಭೆಯನ್ನು ದೇವರಾಜು ಅರಸು ಭವನದಲ್ಲಿ ಆಯೋಜಿಸಲಾಗಿದೆ. ಇನ್ನೂ ಮೂರು ಸಭೆಗಳು ಆಗುತ್ತವೆ. ಅದರಲ್ಲಿ ಎರಡು ಸಭೆ ನನ್ನ ನೇತೃದಲ್ಲಿ ಹಾಗೂ ಇನ್ನೊಂದು ಉನ್ನತ ಮಟ್ಟದ ಸಭೆಯನ್ನು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ, ಸಚಿವರು ಸೇರಿ ಮಾಡುವ ಸಭೆಯಲ್ಲಿ ಅಂತಿಮವಾಗಿ ತೀರ್ಮಾನಿಸಲಾಗುತ್ತದೆ ಎಂದರು.




ಇದಕ್ಕೂ ಮುನ್ನ ಹಾಸನಾಂಬ ದೇವಾಲಯದ ಆವರಣದಲ್ಲಿ ಏರ್ಪಡಿಸಿರುವ ಸಾಂಸ್ಕೃತಿಕ ವೇದಿಕೆಯಲ್ಲಿ ಮಾತನಾಡಿದ ಅವರು, ಕಳೆದ ವರ್ಷದಲ್ಲಿ 5-6 ಗಂಟೆಗೆ ಧರ್ಮದರ್ಶನ ಮಾಡಬೇಕಾದ ಪರಿಸ್ಥಿತಿ ಇತ್ತು. ನಾಡಿನ ವಿವಿಧ ಭಾಗಗಳಿಂದ ಕಲಾವಿದರನ್ನು ಕರೆಸಿ ಅವರಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಭಕ್ತಾಧಿಗಳಿಗೆ ಜಾನಪದ ಕಲೆ, ಸುಗಮ ಸಂಗೀತದ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಸನಾಂಬ ಕಲಾಕ್ಷೇತ್ರ ಸೇರಿದಂತೆ ವಿವಿಧ ಭಾಗಗಳಲ್ಲಿ ಆಯೋಜಿಸಲಾಗಿದೆ. ಆ ಕಾರ್ಯಕ್ರಮಗಳಲ್ಲಿ ಎಲ್ಲರೂ ಭಾಗವಹಿಸುವಂತೆ ತಿಳಿಸಿದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ. ಬಿ.ಆರ್. ಪೂರ್ಣಿಮಾ, ಉಪವಿಭಾಗಾಧಿಕಾರಿ ಮಾರುತಿ ಇತರರಿದ್ದರು.

# ಸಕಲೇಶಪುರ: 12 ಅಡಿ ಉದ್ದದ ಕಾಳಿಂಗ ಸರ್ಪ ಸೆರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಯಸಳೂರು ಹೋಬಳಿ ವಣಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಂಬಲಗೇರಿ ಗ್ರಾಮದಲ್ಲಿ ಆತಂಕ ಉಂಟು ಮಾಡಿದ್ದ 12 ಅಡಿ ಉದ್ದದ ಕಾಳಿಂಗ ಸರ್ಪವನ್ನು ಹಿಡಿದು ಸುರಕ್ಷಿತವಾಗಿ ಬಿಸ್ಲೆ ರಕ್ಷಿತಾರಣ್ಯಕ್ಕೆ ಬಿಡಲಾಯಿತು.

ಶನಿವಾರ ಮುಂಜಾನೆಯಿಂದ ಈ ಕಾಳಿಂಗ ಸರ್ಪ ಕಾಣಿಸಿಕೊಂಡಿದ್ದು, ಗ್ರಾಮಸ್ಥರು, ಕಾಫಿ ತೋಟಕ್ಕೆ ಹೋಗುವ ಕೂಲಿ ಕಾರ್ಮಿಕರಿಗೆ ಆತಂಕ ಉಂಟಾಗಿತ್ತು. ಉರಗ ತಜ್ಞ ಹರೀಶ್ ಸಹಾಯದಿಂದ ಕಾಳಿಂಗ ಸರ್ಪವನ್ನು ಹಿಡಿಯಲಾಯಿತು.

ಪದೇ ಪದೇ ಮಲೆನಾಡು ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುತ್ತಿರುವ ಕಾಳಿಂಗ ಸರ್ಪಗಳು ಭಯ ಉಂಟು ಮಾಡಿದ್ದು, ಈ ಹಾವುಗಳು ಎಲ್ಲಿಂದ ಬರುತ್ತಿವೆ. ಯಾರು ತಂದು ಬಿಡುತ್ತಿದ್ದಾರೆ ಎಂಬುದರ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಮಹಿಳೆ ಮೇಲೆ ದಾಳಿ ನಡೆಸಿದ ಕಾಡುಕೋಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ಮಲೆನಾಡು ಭಾಗದಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾಡುಕೋಣ ಶನಿವಾರ ಪಟ್ಟಣಕ್ಕೆ ಲಗ್ಗೆ ಇಟ್ಟಿದ್ದು ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿ ಗಂಭೀರ ಗಾಯಗೊಳಿಸಿದೆ.

ಪಟ್ಟಣದ ಕುವೆಂಪು ನಗರದಲ್ಲಿ ಓಡಾಡಿರುವ ಕಾಡುಕೋಣ ಜನರಲ್ಲಿ ಆತಂಕ ಸೃಷ್ಟಿಸಿತ್ತು. ಜನರನ್ನು ಕಂಡು ಏಕಾಏಕಿ ಗಾಬರಿಯಲ್ಲಿ ಓಡಾಡಿದ ಕಾಡುಕೋಣ ಒಂದು ಕಾರು ಜಖಂಗೊಳಿಸಿದೆ.

ಗೂರನಹಳ್ಳಿ ಮಂಟಿ ಅರಣ್ಯದ ಕಡೆಯಿಂದ ಕಾಡುಕೋಣ ಪಟ್ಟಣದ ಒಳಕ್ಕೆ ಬಂದಿದೆ ಎಂದು ಶಂಕಿಸಲಾಗಿದೆ. ಕುವೆಂಪುನಗರದ ಜನತಾ ಹೌಸ್‌ನಲ್ಲಿ ಬೀಡುಬಿಟ್ಟಿದ್ದ ಕಾಡುಕೋಣಕ್ಕೆ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲು ಅರಣ್ಯ ಇಲಾಖೆ ಕ್ರಮ ಕೈಗೊಂಡಿತು. ಸಂಜೆ ವೇಳೆಗೆ ಅರವಳಿಗೆ ಚುಚ್ಚುಮದ್ದು ನೀಡಿ ಅರಣ್ಯಕ್ಕೆ ಬಿಡಲಾಯಿತು.


# ಕನಿಷ್ಟ ವೇತನಕ್ಕಾಗಿ ಬಿಸಿಯೂಟ ನೌಕರರ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬಾಕಿ ವೇತನ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಜಿಲ್ಲೆಯ ಬಿಸಿಯೂಟ ನೌಕರರು ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜಿಲ್ಲೆಯಲ್ಲಿ ನಾಲ್ಕು ಸಾವಿರ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅತ್ಯಲ್ಪ ವೇತನದಿಂದ ಕುಟುಂಬ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಕನಿಷ್ಟ ಸಂಬಳವೂ ಕಳೆದ ಎರಡು ತಿಂಗಳಿಂದ ಬಿಡುಗಡೆಯಾಗದೆ ಸಮಸ್ಯೆಯಾಗುತ್ತಿದೆ ಎಂದರು.

ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷೆ ಎಂ.ಬಿ. ಪುಷ್ಪ ಮಾತನಾಡಿ, 24 ವರ್ಷಗಳಿಂದ ಬಿಸಿಯೂಟ ಯೋಜನೆಯಡಿ ಶ್ರಮಿಸುತ್ತಿದ್ದೇವೆ. ಮಕ್ಕಳ ಅಪೌಷ್ಟಿಕತೆ ನಿವಾರಣೆ, ಶಿಕ್ಷಣ ಪ್ರೋತ್ಸಾಹ ಮತ್ತು ಸಾಮಾಜಿಕ ಸಮಾನತೆಯ ಅಭಿವೃದ್ಧಿಗೆ ನಾವೇ ಬೆನ್ನೆಲುಬು. ಸರ್ಕಾರದ ನಿರ್ಲಕ್ಷ್ಯದಿಂದ ನಾವು ಬಾಕಿ ವೇತನಕ್ಕಾಗಿ ಬೀದಿಗಿಳಿಯಬೇಕಾದ ಪರಿಸ್ಥಿತಿ ಬಂದಿದೆಯೆಂದು ಕಿಡಿಕಾರಿದರು.



ಪ್ರತಿತಿಂಗಳ 5ನೇ ತಾರೀಖಿನೊಳಗೆ ವೇತನ ನೀಡಬೇಕೆಂದು ನಿಯಮವಿದ್ದರೂ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಸಂಬಳ ಇಂದಿಗೂ ಬಿಡುಗಡೆಯಾಗಿಲ್ಲ. ಅಲ್ಪ ಸಂಬಳದಲ್ಲಿ ಬದುಕುತ್ತಿರುವ ಸಾವಿರಾರು ಮಹಿಳೆಯರು ಸಾಲಬಾಧೆ, ಕುಟುಂಬ ನಿರ್ವಹಣೆ ತೊಂದರೆಯಿಂದ ನರಳುತ್ತಿದ್ದಾರೆಂದರು.

ಕಾರ್ಪೊರೇಟ್ ಕಂಪನಿಗಳಿಗೆ ಸಾವಿರಾರು ಕೋಟಿ ರೂ. ತೆರಿಗೆ ರಿಯಾಯಿತಿ ಕೊಡುತ್ತಿದ್ದರೆ ಬಿಸಿಯೂಟ ನೌಕರರಿಗೆ ಕನಿಷ್ಟ ವೇತನ ನೀಡಲು ಸರ್ಕಾರ ಹಿಂಜರಿಯುತ್ತಿದೆ. ಮೋದಿ ಸರ್ಕಾರ 29 ಕಾರ್ಮಿಕ ಕಾನೂನು ರದ್ದುಮಾಡಿ 4 ಸಂಹಿತೆ ತರಲು ಮುಂದಾಗಿದೆ. ಅದರ ಪರಿಣಾಮ ಶೇ. 70 ಕಾರ್ಮಿಕರಿಗೆ ಸೌಲಭ್ಯಗಳು ಅನ್ವಯವಾಗುವುದೇ ಇಲ್ಲ ಎಂದು ವಕ್ತಾರರು ಆರೋಪಿಸಿದರು. ಹಿಂದಿನಂತೆ ಮುಷ್ಕರ ನಡೆಸಿ ಹಕ್ಕು ಪಡೆಯುವ ವ್ಯವಸ್ಥೆಯನ್ನೇ ಸರ್ಕಾರ ಕುಂಠಿತಗೊಳಿಸಿದೆ ಎಂದರು.

2025ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಬಾಕಿ ವೇತನವನ್ನು ತಕ್ಷಣ ಬಿಡುಗಡೆ ಮಾಡಬೇಕು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವೇತನ ವಿತರಣೆ ಖಚಿತಪಡಿಸಬೇಕು.

ಬಿಸಿಯೂಟ ನೌಕರರಿಗೆ 26 ಸಾವಿರ ರೂ. ಕನಿಷ್ಟ ವೇತನ, 10 ಸಾವಿರ ರೂ. ಪಿಂಚಣಿ ನೀಡಬೇಕು. ಅಡುಗೆ ಕೇಂದ್ರಗಳನ್ನು ಸುಸಜ್ಜಿತವಾಗಿ ನಿರ್ಮಿಸಬೇಕು. ಉತ್ತರ ಪ್ರದೇಶ ಮತ್ತು ಪಂಜಾಬ್ ಹೈಕೋರ್ಟ್ ತೀರ್ಪಿನಂತೆ 12 ತಿಂಗಳ ಕೆಲಸ ಮತ್ತು ಕೂಲಿ ಜಾರಿ ಮಾಡಬೇಕು.

ಕೆಲಸದ ಅವಧಿಯನ್ನು 4 ಗಂಟೆಯಿಂದ 6 ಗಂಟೆ ಮಾಡಲು ಅಕ್ಷರ ದಾಸೋಹ ಕೈಪಿಡಿಯಲ್ಲಿ ತಿದ್ದುಪಡಿ ತರಬೇಕು. ಯೋಜನೆಯನ್ನು ಶಿಕ್ಷಣ ಇಲಾಖೆಯಡಿ ಸಂಪೂರ್ಣವಾಗಿ ನಡೆಸಬೇಕು.

ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರ ಮಾಡಬಾರದೆಂದು ಒತ್ತಾಯಿಸಿದರು.

ಅಕ್ಷರ ದಾಸೋಹ ಅಧಿಕಾರಿ ಮಂಜುಳಾ ಅವರಿಗೆ ಮನವಿ ಸಲ್ಲಿಸಲಾಯಿತು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಅರವಿಂದ್ ಇತರರಿದ್ದರು.

# ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಿಗೆ ಸನ್ಮಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳು, ಸರ್ಕಾರಿ, ಅರೆ ಸರ್ಕಾರಿ ಇಲಾಖೆ ನೌಕರರ ಸಂಘಗಳ ವತಿಯಿಂದ ನಗರದ ವಿಶ್ವೇಶ್ವರಯ್ಯ ಭವನದಲ್ಲಿ ಅ. 17ರ ಶುಕ್ರವಾರ ಸಂಜೆ 5 ಗಂಟೆಗೆ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಜಿಲ್ಲೆಯಿಂದ ಆಯ್ಕೆಯಾಗಿರುವ ಪದಾಧಿಕಾರಿಗಳಿಗೆ ಅಭಿನಂದನೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸರ್ಕಾರಿ ನೌಕರರ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಎನ್. ಪರಮೇಶ್ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದಲ್ಲಿ ರಾಜ್ಯ ಮಟ್ಟದ ಸಂಘದಲ್ಲಿ ಜಿಲ್ಲೆಯಿಂದ ಹಲವರು ಸ್ಥಾನ ಪಡೆದಿದ್ದಾರೆ.




ಜಿಲ್ಲಾ ನೌಕರರ ಕೋ-ಆಪರೇಟಿವ್ ಸೊಸೈಟಿ ಹಾಗೂ ಜಿಲ್ಲಾ ರಾಜ್ಯ ಸರ್ಕಾರಿ, ಅರೆ ಸರ್ಕಾರಿ ಹಾಗೂ ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷ ಮತ್ತು ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೆ.ಎಂ. ಶ್ರೀನಿವಾಸ್ ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ ಎಂದರು.

ನಮ್ಮ ಸೊಸೈಟಿ ಗೌರವಾಧ್ಯಕ್ಷ ಜಿ.ಪಿ.ವಿಶ್ವನಾಥ ಅವರು ರಾಜ್ಯ ಸಂಘಟನಾ ಕಾರ್ಯದರ್ಶಿ, ಸೊಸೈಟಿ ನಿರ್ದೇಶಕ ಎಸ್.ಮಧು ಅವರು ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಹಾಗೂ ಟಿ.ರಾಜು ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ ಎಂದರು.

ನಮ್ಮ ಸೊಸೈಟಿ ವತಿಯಿಂದ ಹಾಗು ವಿವಿಧ ವೃಂದ ಸಂಘಗಳು, ಇಲಾಖೆಯ ಆತ್ಮೀಯರು ಮತ್ತು ಸ್ವಾಭಿಮಾನಿ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯಿಂದ ರಾಜ್ಯ ಸಂಘದ ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿರುವವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಎಲ್ಲರೂ ಬಂದು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಹಾಸನದ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಅಭಿನಂದನಾ ಸಮರ್ಪಣೆಯನ್ನು ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ, ರಾಜ್ಯ ಉಪಾಧ್ಯಕ್ಷ ಕೆ.ಎಂ. ಶ್ರೀನಿವಾಸ್ ನಡೆಸಿಕೊಡಲಿದ್ದಾರೆ. ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಟಿ. ರಾಜು, ಜಿ.ಪಿ.ವಿಶ್ವನಾಥ, ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿ ಎನ್.ಮಧು ಭಾಗವಹಿಸಲಿದ್ದಾರೆಂದರು.

ಜಿಲ್ಲಾ ಸರ್ಕಾರಿ ನೌಕರರ ಕೋ-ಆಪರೇಟಿವ್ ಸೊಸೈಟಿ ಗೌರವಾಧ್ಯಕ್ಷ ಬಿ.ಎನ್.ರಾಜಶೇಖರಪ್ಪ, ನಿರ್ದೇಶಕ ಎನ್. ಪಾಲಾಕ್ಷ, ಉಪಾಧ್ಯಕ್ಷ ಬಿ.ಆರ್.ಧರ್ಮ, ಗೌರವ ಕಾರ್ಯದರ್ಶಿ ಸತೀಶ್, ಉಪಾಧ್ಯಕ್ಷ ಗೋಪಾಲಕೃಷ್ಣ ಮತ್ತಿತರರಿದ್ದರು.

# ಆಸ್ಪತ್ರೆಯಿಂದ ದೂರವಿರಲು ಪೌಷ್ಟಿಕ ಆಹಾರ ಸೇವಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪೌಷ್ಟಿಕ ಆಹಾರ ಸೇವಿಸಿದರೆ ಅನಾರೋಗ್ಯಕ್ಕೆ ತುತ್ತಾಗಿ ಆಸ್ಪತ್ರೆಗೆ ಭೇಟಿ ನೀಡುವ ಸಂದರ್ಭವೇ ಸೃಷ್ಟಿಯಾಗುವುದಿಲ್ಲ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅಭಿಪ್ರಾಯಪಟ್ಟರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತೋಟಿ ಹಾಗೂ ದಿಂಡಗೂರು ಅಂಗನವಾಡಿ ವೃತ್ತದಿಂದ ಹಮ್ಮಿಕೊಂಡಿದ್ದ ಪೋಷಣ್ ಮಾಸಾಚರಣೆ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಹೊಲ ಗದ್ದೆಯಲ್ಲಿ ಸಾಕಷ್ಟು ಔಷಧಿ ಸಸ್ಯಗಳು ಬೆಳೆಯುತ್ತವೆ. ಕೈತೋಟದಲ್ಲಿಯೂ ಹರಿಸು ತರಕಾರಿ ಇರುತ್ತದೆ. ಅದನ್ನು ಸಕಾಲಕ್ಕೆ ಸೇವನೆ ಮಾಡಿದರೆ ಯಾವುದೇ ರೋಗಗಳು ಬರುವುದಿಲ್ಲ ಎಂದರು.



ಶಿಕ್ಷಣದ ಜತೆಯಲ್ಲಿ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಂಗನವಾಡಿಯ ಮೂಲಕ ಪೌಷ್ಟಿಕ ಆಹಾರ ನೀಡುತ್ತಿದೆ. ಆರೋಗ್ಯವಂತ ಸಮಾಜ ನಿರ್ಮಾಣವಾಗಬೇಕಾದರೆ ಆರೋಗ್ಯವಂತ ಮಕ್ಕಳು ದೇಶಕ್ಕೆ ಮುಖ್ಯವಾಗಿದೆ. ಹಾಗಾಗಿ ಪ್ರಧಾನ ಮಂತ್ರಿ ಮೋದಿ ಪೋಷಣ್ ಅಭಿಯಾನಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಗ್ರಾಮೀಣ ಭಾಗದಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ಮುಂದಾಗುತ್ತಿದ್ದಾರೆ ಎಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್ ಮಾತನಾಡಿ, ಹೊಸದಾಗಿ ಅಂಗನವಾಡಿ ಸಹಾಯಕಿಯರು ಹಾಗೂ ಕಾರ್ಯಕರ್ತೆಯರ ಹುದ್ದೆ ಅಲಂಕರಿಸುವವರು ಶಿಸ್ತಿನಿಂದ ಕರ್ತವ್ಯ ನಿರ್ವಹಿಸಬೇಕು. ಮಹಿಳೆಯರು ಪೌಷ್ಟಿಕ ಆಹಾರ ಕಡೆ ಗಮನ ಹರಿಸುವುದಿಲ್ಲ. ಮನೆಯಲ್ಲಿ ಎಲ್ಲರಿಗೂ ಪೌಷ್ಟಿಕ ಆಹಾರ ಕೊಟ್ಟು ತಾವು ಉಳಿಕೆ ಆಹಾರ ಸೇವನೆ ಮಾಡುತ್ತಾರೆ. ಅದರಿಂದ ಸ್ತ್ರೀಯರು ಮುಪ್ಪಿನಲ್ಲಿ ಅನಾರೋಗ್ಯಕ್ಕೆ ತುತ್ತಾಗುತ್ತಾರೆ ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಅಪೌಷ್ಟಿಕತೆ ನಿವಾರಣೆ ಮಾಡಲು ಸಾಕಷ್ಟು ಯೋಜನೆಗಳನ್ನು ರೂಪಿಸುತ್ತಿದೆ. ಆರೋಗ್ಯ ಇಲಾಖೆ ಸಹಕಾರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸ್ತ್ರೀಶಕ್ತಿ ಸಂಘದವರು ಪಾಲ್ಗೊಂಡು ಸರ್ಕಾರ ಸುತ್ತೋಲೆಯಂತೆ ಯೋಜನೆಗಳನ್ನು ಸಕಾಲಕ್ಕೆ ಪಡೆದುಕೊಳ್ಳಿ ಎಂದರು.

ಸುಕನ್ಯಾ ಸಮೃದ್ಧಿ ಯೋಜನೆಯ ಇಬ್ಬರು ಫಲಾನುಭವಿಗಳಿಗೆ ವಾರ್ಷಿಕ 3000 ರೂ. ನೀಡುವ ಅಂಚೆ ಕಚೇರಿ ಪಾಸ್ ಪುಸ್ತಕ ವಿತರಣೆ, 100 ಅಂಗನವಾಡಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಟಿವಿ ವಿತರಣೆ, 36 ಅಂಗವಾಡಿ ಕಾರ್ಯಕರ್ತೆಯರು ಹಾಗೂ 69 ಸಹಾಯಕಿಯರು ನೇಮಕಾತಿ ಪತ್ರ ವಿತರಿಸಲಾಯಿತು. ಮಹಿಳಾ ಇಲಾಖೆ ಉಪನಿರ್ದೇಶಕ ಧರಣಿಕುಮಾರ್, ಸಿಡಿಪಿಒ ಇಂದ್ರಾ, ಬಿಇಒ ದೀಪಾ, ಮೇಲ್ವಿಚಾರಕಿ ಮಮತಾ, ಪಾರ್ವತಮ್ಮ ರತ್ನಮ್ಮ ಇತರರಿದ್ದರು.

## ಲಿಂಗಾನುಪಾತ ವ್ಯತ್ಯಾಸವಾಗದಿರಲಿ

ತಾಲ್ಲೂಕಿನಲ್ಲಿ 8 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಒಂದರಿಂದ ಆರು ವರ್ಷದ ಒಳಗೆ 5237 ಗಂಡು ಮಕ್ಕಳು, 5263 ಹೆಣ್ಣು ಮಕ್ಕಳು ಇದ್ದಾರೆ. ಗಂಡು ಹಾಗೂ ಹೆಣ್ಣು ಲಿಂಗಾನುಪಾತ' ವ್ಯತ್ಯಾಸ ಆಗದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ದೇಶದ ಎಲ್ಲಾ ರಾಜ್ಯಗಳು ಗಮನಹರಿಸಬೇಕಾಗಿದೆ. ಅನುಪಾತದಲ್ಲಿ ವ್ಯತ್ಯಾಸವಾದರೆ ಸಮಾಜಕ್ಕೆ ಮಾರಕವಾಗಲಿದೆ ಎಂದರು.

ತಾಲ್ಲೂಕಿನಲ್ಲಿ 130 ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಇಲ್ಲ. ಹಳೆ ಶಾಲೆಗಳು, ಸಮುದಾಯ ಭವನದಲ್ಲಿ ನಡೆಯುತ್ತಿದೆ. ಸರ್ಕಾರಕ್ಕೆ ಈ ಬಗ್ಗೆ ಒತ್ತಡ ಹಾಕಿದೆ ಮೇಲೆ 11 ಅಂಗನವಾಡಿ ಕೇಂದ್ರಕ್ಕೆ ನೂತನ ಕಟ್ಟಡ ಮಂಜೂರು ಮಾಡಿದೆ. ಒಂದು ವಾರದಲ್ಲಿ ಟೆಂಡರ್ ಕರೆದು ಕಾಮಗಾರಿ ಮಾಡಿಸಿ ತಿಂಗಳ ಒಳಗೆ 11 ಅಂಗನವಾಡಿ ನೂತನ ಕಟ್ಟಡ ಲೋಕಾರ್ಪಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

# ಸಂಸದರ ಭೇಟಿಯಾದ ಡಿಆರ್‌ಎಂ ಮುದಿತ್ ಮಿತ್ತಲ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಅವರು ಶುಕ್ರವಾರ ಬೆಳಿಗ್ಗೆ ಸಂಸದರ ಕಚೇರಿಯಲ್ಲಿ ಸಂಸದ ಶ್ರೇಯಸ್ ಪಟೇಲ್ ಅವರನ್ನು ಭೇಟಿಯಾಗಿ ವಿವಿಧ ಕಾಮಗಾರಿ ಕುರಿತು ಚರ್ಚೆ ನಡೆಸಿದರು.

ನಗರದ ರಾಜಘಟ್ಟದಲ್ಲಿ ನಡೆಯುತ್ತಿರುವ ಗೂಡ್ಸ್ ರೈಲ್ವೆ ಶೆಡ್ ಕಾಮಗಾರಿಗಾಗಿ ಸಾರ್ವಜನಿಕ ರಸ್ತೆ ಬಳಸಿಕೊಳ್ಳುತ್ತಿರುವ ಕುರಿತು ಸ್ಥಳೀಯರಿಂದ ದೂರು ಬಂದ ಹಿನ್ನೆಲೆಯಲ್ಲಿ ಸಂಸದರು ಸಮಸ್ಯೆ ವಿವರಿಸಿದರು. ಹಲವು ವರ್ಷಗಳಿಂದ ರಾಜಘಟ್ಟ, ಗವೇನಹಳ್ಳಿ ಹಾಗೂ ಸುತ್ತಲಿನ ಜನರ ಸಂಪರ್ಕ ರಸ್ತೆಗೆ ಧಕ್ಕೆ ತರುವುದು ಬೇಡ. ಕಾಮಗಾರಿಗೆ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

ಜೊತೆಗೆ ಹೊಳೆನರಸೀಪುರದ ಅಂಬೇಡ್ಕರ್ ಭವನದಲ್ಲಿ ಆರ್‌ಒಪಿ ಪ್ಲಾಂಟ್, ಅರಸೀಕೆರೆ ರೈಲ್ವೆ ನಿಲ್ದಾಣದಲ್ಲಿ ಸ್ವಚ್ಛತೆ ಹಾಗು ಕಡೂರು ನಿಲ್ದಾಣದಲ್ಲಿ ಶೌಚಾಲಯ ವ್ಯವಸ್ಥೆ ಸರಿಪಡಿಸಬೇಕೆಂದು ಅಧಿಕಾರಿಗೆ ನಿರ್ದೇಶನ ನೀಡಿದರು.

ಕೇಂದ್ರ ಸರ್ಕಾರದ ವಿಶೇಷ ಸ್ವಚ್ಛತಾ ಅಭಿಯಾನ 5.0ರ ಅಂಗವಾಗಿ ನೈಋತ್ಯ ರೈಲ್ವೆಯ ಮೈಸೂರು ವಿಭಾಗದಿಂದ ಶನಿವಾರ ನಗರದ ರೈಲು ನಿಲ್ದಾಣದಲ್ಲಿ ಅಮೃತ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸುವುದು, ನೈರ್ಮಲ್ಯ ಕಾಪಾಡಿಕೊಳ್ಳುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಅವರು, ರೈಲು ನಿಲ್ದಾಣಕ್ಕೆ ಭೇಟಿ ನೀಡಿ ನಿಲ್ದಾಣದ ಸ್ವಚ್ಛತೆ, ನೈರ್ಮಲ್ಯ ಮತ್ತು ಮೂಲಸೌಕರ್ಯಗಳ ಕುರಿತು ಪರಿಶೀಲನೆ ನಡೆಸಿದರು. ಪ್ಲಾಸ್ಟಿಕ್ ಮುಕ್ತ ಅಭಿಯಾನದ ಕುರಿತು ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿದರು.

ನಂತರ ಪ್ರಯಾಣಿಕರೊಂದಿಗೆ ಸಂವಾದ ನಡೆಸಿ, ಅಮೃತ್ ಭಾರತ್ ಯೋಜನೆ ಅಡಿಯಲ್ಲಿ ಹಾಸನ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿ ಕುರಿತು ವಿವರಿಸಿದರು. ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ. ಲೋಹಿತೇಶ್ವರ ಮತ್ತಿತರರು ಇದ್ದರು.

# ನಿಖರ ಜನಸಂಖ್ಯೆ ಮಾಹಿತಿಗೆ ಮತ್ತೆ ಸಮೀಕ್ಷೆ

## ಗಣತಿಯಿಂದ ಹೊರಗುಳಿದವರ ಪತ್ತೆಗೆ ಸೂಚನೆ | ನಗರ ಪ್ರದೇಶದಲ್ಲಿ ಹೆಚ್ಚಿದ ಸಮಸ್ಯೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ನಿಗದಿತ ಅವಧಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮುಗಿಯದ ಹಿನ್ನೆಲೆಯಲ್ಲಿ ದಸರಾ ರಜೆ ವಿಸ್ತರಿಸಿ ಶಿಕ್ಷಕರಿಗೆ ಮತ್ತೆ ಎಂಟು ದಿನಗಳ ಸಮಯಾವಕಾಶ ನೀಡಲಾಗಿದೆಯಾದರೂ ನಗರ ವ್ಯಾಪ್ತಿಯಲ್ಲಿ ಸಮೀಕ್ಷೆ ಪಾರದರ್ಶಕವಾಗಿ ನಡೆಯುತ್ತಿಲ್ಲವೆಂಬ ವ್ಯಾಪಕ ದೂರುಗಳು ಕೇಳಿಬಂದಿವೆ.

ಗ್ರಾಮೀಣ ಭಾಗದಲ್ಲಿ ಸಮೀಕ್ಷೆ ಯಶಸ್ವಿಯಾಗಿದೆಯಾದರೂ ನಗರ, ಪಟ್ಟಣಗಳಲ್ಲಿ ಗಣತಿದಾರರು ಮನೆಗಳಿಗೆ ಭೇಟಿ ನೀಡಿ ಕುಟುಂಬದ ಎಲ್ಲಾ ಸದಸ್ಯರ ಮಾಹಿತಿ ಪಡೆಯದೆ ಕೇವಲ ಒಬ್ಬರನ್ನು ಮಾತನಾಡಿಸಿ ಮುಂದಕ್ಕೆ ಹೋಗುತ್ತಿದ್ದಾರೆ. ಅದರಿಂದ ನಿಖರ ಜನಸಂಖ್ಯೆ ತಿಳಿಯುವುದು ಕಷ್ಟವಾಗುತ್ತಿದೆ.

ನಗರ ಪ್ರದೇಶಗಳಲ್ಲಿ ಬಹುತೇಕರು ನೌಕರರು ಇರುತ್ತಾರೆ. ಕುಟುಂಬದಲ್ಲಿ ಎಪಿಎಲ್ ಕಾರ್ಡ್ ಇರುತ್ತದೆ ಅಥವಾ ಇರುವುದಿಲ್ಲ. ಅಂತಹ ಮನೆಗಳಿಗೆ ಭೇಟಿ ನೀಡುವ ಗಣತಿದಾರರು ಕುಟುಂಬದ ಎಲ್ಲಾ ಸದಸ್ಯರ ಆಧಾರ್ ನಂಬರ್ ನಮೂದಿಸಬೇಕು. ಹಾಗೆ ಮಾಡಲು 20 ರಿಂದ 30 ನಿಮಿಷ ಸಮಯ ಬೇಕಾಗುವುದರಿಂದ ಕಾಯುವ ಬದಲು ಸಮೀಕ್ಷೆ ಅಪೂರ್ಣವಿದ್ದರೂ ಮುಗಿದಿದೆಯೆಂದು ಮೊಬೈಲ್ ಅಪ್ಲಿಕೇಷನ್ ಆಫ್ ಮಾಡುತ್ತಿದ್ದಾರೆ. ಮತ್ತೆ ಕೆಲವು ಕಡೆ ಸಾರ್ವಜನಿಕರು ಸಕಾರಾತ್ಮಕವಾಗಿ ಸ್ಪಂದಿಸದೆ ಇರುವುದು ಸಮಸ್ಯೆ ತಂದೊಡ್ಡಿದೆ.



### ಇಷ್ಟವಿಲ್ಲದವರ ಕಾರಣ ಹೇಳಬೇಕು

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಆರಂಭದಲ್ಲೇ ಹಲವು ಸಮುದಾಯಗಳಿಂದ ವಿರೋಧ ವ್ಯಕ್ತವಾದ್ದರಿಂದ ಹೈಕೋರ್ಟ್ ಇಷ್ಟವಿಲ್ಲದವರು ಸಮೀಕ್ಷೆಯಲ್ಲಿ ಭಾಗವಹಿಸದೆ ಇರಬಹುದೆಂದು ಆದೇಶ ನೀಡಿತ್ತು. ಅದರಂತೆ ಗಣತಿದಾರರು ಇಷ್ಟವಿಲ್ಲದವರ ಮನೆಗಳನ್ನು ಹಾಗೆ ಬಿಟ್ಟು ತೆರಳಿದ್ದರು. ಆದರೆ ಅ. 8 ರಂದು ಸಮೀಕ್ಷೆ ವೇಳೆ ಮಾಹಿತಿ ನೀಡದೆ ಇರಲು ಕಾರಣವೇನೆಂದು ಸ್ಪಷ್ಟವಾಗಿ ನಮೂದಿಸಬೇಕೆಂದು ಸರ್ಕಾರ ಸೂಚಿಸಿದೆ. ಹೀಗಾಗಿ ತಮ್ಮ ಕಾರ್ಯ ಮುಗಿಸಿದ್ದ ಶಿಕ್ಷಕರು ಸಹ ಅಂತಹ ಮನೆಗಳನ್ನು ಹುಡುಕಿ ಹೋಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

### ಜನಸಂಖ್ಯೆ ತಿಳಿಯಲು ಕಷ್ಟ

ಹಾಸನ ಜಿಲ್ಲೆಯಲ್ಲಿ 18.50 ಲಕ್ಷ ಜನಸಂಖ್ಯೆ ಇದೆ ಎಂದು ಅಂದಾಜಿಸಲಾಗಿದೆ. ಸೆ. 22 ರಿಂದ ಆರಂಭವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯಲ್ಲಿ 15 ಲಕ್ಷ ಜನರಷ್ಟೇ ಲೆಕ್ಕಕ್ಕೆ ಸಿಕ್ಕಿದ್ದಾರೆ. ಉಳಿದ 3.50 ಲಕ್ಷ ಜನರು ಎಲ್ಲಿಗೆ ಹೋದರು ಎಂಬ ಮಾಹಿತಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕೇಳಿದೆ. ಸಮೀಕ್ಷೆ ವೇಳೆ ಕೇವಲ ಕುಟುಂಬದಲ್ಲಿ ಒಬ್ಬರು ಅಥವಾ ಇಬ್ಬರು ಮಾತ್ರ ನಮೂದಾಗಿರುವ ಕುಟುಂಬಗಳನ್ನು ಪತ್ತೆ ಹಚ್ಚಿ ಮತ್ತೊಮ್ಮೆ ಭೇಟಿ ನೀಡಿ ಪೂರ್ಣ ಮಾಹಿತಿ ಪಡೆಯಲು ಸೂಚಿಸಲಾಗಿದೆ. ಸರ್ಕಾರದ ಈ ನಿಯಮದಿಂದ ಸಮೀಕ್ಷಾದಾರರು ಮತ್ತೊಮ್ಮೆ ಮನೆ ಮನೆಗೆ ಭೇಟಿ ನೀಡುವ ಅನಿವಾರ್ಯತೆ ಸೃಷ್ಟಿಯಾಗಿದೆ.

### 40 ಸಾವಿರ ಮನೆಗಳು ಬಾಕಿ

ಜಿಲ್ಲಾದ್ಯಂತ 5,42,335 ಕುಟುಂಬಗಳನ್ನು ಸಮೀಕ್ಷೆಗಾಗಿ ಗುರುತಿಸಲಾಗಿತ್ತು. ಅ. 23 ರಿಂದಲೇ ಸೆಸ್ಕಾಂ ಸಿಬ್ಬಂದಿ ಮನೆ ಮನೆಗೆ ಸ್ಟಿಕ್ಕರ್ ಅಂಟಿಸಿ ಜಿಯೋ ಟ್ಯಾಗಿಂಗ್ ಅಳವಡಿಕೆ ಮಾಡಿದ್ದರು. ಆರ್‌ಆರ್ ನಂಬರ್ ಆಧರಿಸಿ ಸಮೀಕ್ಷೆದಾರರು ಮನೆ ಮನೆಗೆ ಭೇಟಿ ನೀಡಿದ್ದಾರೆ. ಆದರೆ ಸ್ಟಿಕ್ಕರ್‌ಗಳನ್ನು ವಾಸದ ಮನೆಗಳು ಮಾತ್ರವಲ್ಲದೆ ದೇವಸ್ಥಾನ, ಶಾಲಾ ಕಾಲೇಜು ಕಟ್ಟಡ, ಅಂಗನವಾಡಿ, ವಾಣಿಜ್ಯ ಮಳಿಗೆಗಳಿಗೂ ಅಂಟಿಸಲಾಗಿದೆ. ಒಂದು ಕುಟುಂಬ ಎರಡು ಮನೆಗಳನ್ನು ಹೊಂದಿ ಪ್ರತ್ಯೇಕ ವಿದ್ಯುತ್ ಮೀಟರ್ ಅಳವಡಿಸಿಕೊಂಡಿದ್ದರೆ ಅಲ್ಲಿಗೂ ಸ್ಟಿಕ್ಕರ್ ಅಂಟಿಸಿರುವುದರಿಂದ ಸಮೀಕ್ಷೆದಾರರು ಗೊಂದಲಕ್ಕೆ ಸಿಲುಕಿದ್ದಾರೆ. ವಾಸವಿರದ ಮನೆಗೆ ಸ್ಟಿಕ್ಕರ್ ಅಂಟಿಸಿದ್ದರಿಂದ ಆ ಮನೆಯಲ್ಲಿ ಸಮೀಕ್ಷೆ ಏಕೆ ಮಾಡಿಲ್ಲ ಎಂಬುದಕ್ಕೆ ಕಾರಣ ನೀಡಬೇಕಿರುವುದರಿಂದ ಸಮೀಕ್ಷೆದಾರರು ಹೈರಾಣಾಗಿದ್ದಾರೆ. ಜೊತೆಗೆ ಸ್ಟಿಕ್ಕರ್ ಅಂಟಿಸಿದ್ದರೂ 40 ಸಾವಿರ ಮನೆಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಶಿಕ್ಷಕರಿಗೆ ನೀಡಿದ್ದ ಸಮೀಕ್ಷಾ ಗುರಿ ಮುಗಿದಿದ್ದರೂ ಮನೆಗಳು ಮುಗಿಯದೆ ಇರುವುದು ಹಲವು ಸಮಸ್ಯೆಗೆ ಕಾರಣವಾಗಿದೆ. ಹೀಗಾಗಿ ಶಿಕ್ಷಕರಿಗೆ ಕಾರ್ಯಭಾರ ಹೆಚ್ಚಾಗಿದೆ.

> "ನಗರ ಪ್ರದೇಶಗಳಲ್ಲಿ ಸಮೀಕ್ಷೆ ಸರಿಯಾಗಿ ನಡೆಯುತ್ತಿಲ್ಲ, ಜನಸಂಖ್ಯೆ ನಿಖರವಾಗಿ ತಿಳಿಯುತ್ತಿಲ್ಲವೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಹೇಳಿದ್ದಾರೆ. ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ವರೆಗೆ ಶೇ. 93 ರಷ್ಟು ಸಮೀಕ್ಷೆ ಪೂರ್ಣಗೊಂಡಿದ್ದು ಅ. 18ರ ಒಳಗೆ ಪೂರ್ಣಗೊಳಿಸಲಾಗುವುದು.
>
> **- ಕುಮಾರ್,**
> **ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ**

# ಅರೇಹಳ್ಳಿ ಪಟ್ಟಣದಲ್ಲಿ ತ್ಯಾಜ್ಯ ವಿಲೇವಾರಿ ಸಮಸ್ಯೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಅರೇಹಳ್ಳಿ: ಪಟ್ಟಣವು ದಿನದಿಂದ ದಿನಕ್ಕೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದರೂ ತ್ಯಾಜ್ಯ ವಿಲೇವಾರಿ ವ್ಯವಸ್ಥೆ ಇನ್ನೂ ಸಂಪೂರ್ಣವಾಗಿ ಜಾರಿಯಾಗದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಪಂಚಾಯಿತಿ ವ್ಯಾಪ್ತಿಯ ಪ್ರತಿಯೊಂದು ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ, ಗ್ರಾಮ ಪಂಚಾಯಿತಿ ಕೆಲ ವರ್ಷಗಳ ಹಿಂದೆ ಪಟ್ಟಣದ ಹೊರವಲಯದ ಹೆಗ್ಗಡಿಹಳ್ಳಿ ರಸ್ತೆಯಲ್ಲಿ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಕಾರ್ಯವನ್ನು ಆರಂಭಿಸಿತ್ತು.

ನಾನಾ ಕಾರಣಗಳಿಂದ ಕಾಮಗಾರಿ ಅಂತಿಮ ಹಂತ ತಲುಪದೆ ವಿಳಂಬವಾಗಿದೆ.

ಈ ನಡುವೆ ಪಟ್ಟಣದ ಬಹುತೇಕ ಮನೆಗಳ ತ್ಯಾಜ್ಯವನ್ನು ಪಂಚಾಯಿತಿ ಸಿಬ್ಬಂದಿ ವಾಹನಗಳ ಮೂಲಕ ಸಂಗ್ರಹಿಸಿ ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡುತ್ತಿದ್ದರೂ ಕೆಲ ನಾಗರಿಕರು ಪಟ್ಟಣದ ಹೊರವಲಯದ ಲಿಂಗಾಪುರ ಗ್ರಾಮದ ಸ್ಮಶಾನದ ಹತ್ತಿರ ಸೇರಿ ವಿವಿಧ ರಸ್ತೆಗಳ ಬದಿಗಳಲ್ಲಿ ತ್ಯಾಜ್ಯವನ್ನು ಬಿಸಾಡುತ್ತಿರುವುದು ಕಂಡುಬಂದಿದೆ.

ಸಮರ್ಪಕವಾಗಿ ತ್ಯಾಜ್ಯ ವಿಲೇವಾಡಿ ಮಾಡದೆ ಎಲ್ಲೆಂದರಲ್ಲಿ, ರಸ್ತೆ ಬದಿಯಲ್ಲಿ ತ್ಯಾಜ್ಯದ ರಾಶಿಗಳು ಗುಡ್ಡೆಯಾಗುತ್ತಿದ್ದು, ಪರಿಸರ ಮಾಲಿನ್ಯ ಉಂಟಾಗುತ್ತಿದೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಪಟ್ಟಣದ ಶುಚಿತ್ವ ಕಾಪಾಡಲು, ಪಂಚಾಯಿತಿ ಈ ಹಿಂದೆ ಮನೆ ಮನೆಗೆ ತ್ಯಾಜ್ಯ ಸಂಗ್ರಹ ಬಕೆಟ್‌ಗಳನ್ನು ವಿತರಿಸಿ, ಪ್ರತಿದಿನ ಪಟ್ಟಣದಿಂದ ಹಾಗು ವಾರಕ್ಕೆ ಎರಡು ಬಾರಿ ಹೊರವಲಯದ ಗ್ರಾಮಗಳಿಂದ ತ್ಯಾಜ್ಯ ಸಂಗ್ರಹಣೆ ವ್ಯವಸ್ಥೆ ಮಾಡಿತ್ತು. ಕೆಲವರ ನಿರ್ಲಕ್ಷ್ಯದಿಂದ ರಸ್ತೆಯ ಬದಿಗಳಲ್ಲಿ ತ್ಯಾಜ್ಯವನ್ನು ಬಿಸಾಡುವ ಪ್ರಕ್ರಿಯೆ ಮುಂದುವರಿದಿದೆ. ಪಂಚಾಯಿತಿಯಿಂದ ಹಲವು ಬಾರಿ ಆ ಸ್ಥಳಗಳಲ್ಲಿ ತ್ಯಾಜ್ಯವನ್ನು ತೆರವುಗೊಳಿಸಿ, ಸೂಚನಾ ಫಲಕಗಳನ್ನು ಅಳವಡಿಸಿದರೂ, ರಸ್ತೆ ಬದಿ ಕಸ ಎಸೆಯುವುದು ಮರುಕಳಿಸುತ್ತಲೇ ಇದೆ. ಇದರಿಂದ ನಿತ್ಯ ಸಂಚರಿಸುವ ನೂರಾರು ವಾಹನ ಸವಾರರು ಹಾಗು ಸಾರ್ವಜನಿಕರು ಮೂಗುಮುಚ್ಚಿಕೊಂಡು ರಸ್ತೆಯಲ್ಲಿ ಸಂಚರಿಸುವಂತಾಗಿದೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಕಠಿಣ ಕ್ರಮ ಕೈಗೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಪಟ್ಟಣದ ವಿವಿಧ ಪ್ರದೇಶಗಳು ದೊಡ್ಡ ಮಟ್ಟದ ತ್ಯಾಜ್ಯ ತಾಣಗಳಾಗಿ ಮಾರ್ಪಡುವ ಭೀತಿ ಇದೆ. ಆದ್ದರಿಂದ ತ್ಯಾಜ್ಯ ವಿಲೇವಾರಿ ಘಟಕದ ಕಾಮಗಾರಿ ಶೀಘ್ರ ಪೂರ್ಣಗೊಂಡು, ನಿಯಮ ಉಲ್ಲಂಘಿಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.

# ಪಾಸ್ ರದ್ದು ಮಾಡಿರುವುದರಿಂದ ಜನರಿಗೆ ಅನುಕೂಲ: ಸಚಿವ ಕೃಷ್ಣಬೈರೇಗೌಡ

ಹಾಸನ: ಹಾಸನಾಂಬ ದರ್ಶನಕ್ಕೆ ವಿಐಪಿ, ವಿವಿಐಪಿ ಪಾಸ್ ರದ್ದು ಮಾಡಿರಿವುದರಿಂದ ಜನರಿಗೆ ಅನುಕೂಲವಾಗಿದೆ. ಯಾರೋ ಕೆಲವರ ಅನುಕೂಲಕ್ಕೆ ಹೆಚ್ಚಿನ ಜನರಿಗೆ ಅನಾನುಕೂಲ ಆಗಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಸಮಯ ನೀಡಿದ್ದೇವೆ, ಆ ಸಮಯದಲ್ಲಿ ಗಣ್ಯರು ಬರಬೇಕು ಅಷ್ಟೇ. ಲಕ್ಷಾಂತರ ಜನ ದರ್ಶನ ಪಡೆದಿರುವುದನ್ನು ಅವರೂ ಒಮ್ಮೆ ನೋಡಬೇಕು. ನಾವು ತೆಗೆದುಕೊಂಡ ತೀರ್ಮಾನಕ್ಕೆ ನಮ್ಮ ಜಿಲ್ಲೆಯ ಜನಪ್ರತಿನಿಧಿಗಳು ಒಪ್ಪಿಗೆ ಸೂಚಿಸಿದ್ದಾರೆ. ಜನಸಾಮಾನ್ಯರು ಚೆನ್ನಾಗಿ ದರ್ಶನ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಅದೇ ನಮಗೆ ಸಮಾಧಾನ. ಜನ ಖುಷಿಯಾಗಿ ಹೋಗುತ್ತಿದ್ದಾರೆ ಎಂದರು.

ರಾಯಚೂರು, ಕೊಪ್ಪಳದಿಂದ ಬಂದಿರುವ ಭಕ್ತರನ್ನ ಮಾತನಾಡಿಸಿದೆ. ಕೆಲವರಿಗೆ ಒಂದು ಒಂದೂವರೆ ಗಂಟೆಯಲ್ಲಿ ದರ್ಶನ ಆಗಿದೆ. ನಾಳೆಯಿಂದಲೂ ಹೀಗೆ ಇರುತ್ತೆ ಎಂದು ಹೇಳಲು ಆಗಲ್ಲ. ಇನ್ನೂ ಎರಡು ಮೂರು ದಿನ ನೋಡಬೇಕು. ಕೆಲವರು ಶಿಷ್ಟಾಚಾರ ವ್ಯವಸ್ಥೆ ಕಟ್ಟುನಿಟ್ಟಾಯಿತು ಎನ್ನುತ್ತಿದ್ದಾರೆ. ಎಲ್ಲರಿಗೂ ವಿನಾಯಿತಿ ಕೊಡಲು ಆಗೋದಿಲ್ಲ. ಒಬ್ಬರಿಗೆ ನೀಡಿದರೆ ಎಲ್ಲರಿಗೂ ನೀಡಬೇಕಾಗುತ್ತದೆ. ಈ ವಿಚಾರವಾಗಿ ನಾನು ಎಲ್ಲರಿಗೂ ಎಚ್ಚರಿಸಲು ಬಯಸುವೆ, ಜನಸಮುದಾಯ ಒಂದೆಡೆ ಸೇರಿದಾಗ ಏನೆಲ್ಲಾ ದುರ್ಘಟನೆ ನಡೆದಿವೆ ಎಂಬುದು ನಮ್ಮ ಮುಂದಿದೆ. ಬೆಂಗಳೂರಲ್ಲಿ ಏನಾಯಿತು, ತಮಿಳುನಾಡಲ್ಲಿ ಏನಾಯಿತು ಎಲ್ಲವನ್ನೂ ಮರೆಯಲು ಆಗೋದಿಲ್ಲ, ಕಾರ್ಯಕ್ರಮದಲ್ಲಿ ಏನೂ ಎಡವಟ್ಟು ಆಗಬಾರದು ಅಂದರೆ ಎಲ್ಲರೂ ಸಹಕಾರ ಕೊಡಬೇಕೆಂದು ಹೇಳಿದರು.

# ಮಾನಸಿಕ ಆರೋಗ್ಯ ಅತ್ಯವಶ್ಯಕ: ನ್ಯಾಯಾಧೀಶೆ ಬಿ.ಎಂ. ಶೈಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ದೈಹಿಕ ಆರೋಗ್ಯದಷ್ಟೆ ಮಾನಸಿಕ ಆರೋಗ್ಯವು ಬಹಳ ಅವಶ್ಯಕವಾಗಿದ್ದು, ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚು ಗಮನ ಹರಿಸಬೇಕು ಎಂದು 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಮಾನಸಿಕ ಆರೋಗ್ಯ ವಿಮರ್ಶನಾ ಮಂಡಳಿ ಅಧ್ಯಕ್ಷ ಬಿ.ಎಂ. ಶೈಲ ತಿಳಿಸಿದ್ದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಹಾಸನ ಮತ್ತು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮನೋವೈದ್ಯಕೀಯ ವಿಭಾಗ, ಹಿಮ್ಸ್, ಜಿಲ್ಲಾ ಮಾನಸಿಕ ಆರೋಗ್ಯ ವಿಮರ್ಶನಾ ಮಂಡಳಿಯಿಂದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯಲ್ಲಿ ಮಾತನಾಡಿ, ದೇಹದ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ದಿನನಿತ್ಯ ಯೋಗ, ಪ್ರಾಣಾಯಾಮ, ಧ್ಯಾನವನ್ನುಮಾಡಬೇಕುಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶೆ ದಾಕ್ಷಾಯಿಣಿ ಮಾತನಾಡಿ, ಮಾನಸಿಕ ಅಸ್ವಸ್ಥರಿಗೆ ಆರೈಕೆದಾರರು ಯಾರೂ ಇಲ್ಲದಂತಹ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಾಮನಿರ್ದೇಶಿತ ಆರೈಕೆದಾರರು ಅಸ್ವಸ್ಥರನ್ನುಆರೈಕೆ ಮಾಡಬೇಕಾಗಿದೆ ಎಂದು ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ. ನಾಗೇಶ್ ಪಿ.ಆರಾಧ್ಯ ಮಾತನಾಡಿ, ಮಾನಸಿಕ ಕಾಯಿಲೆಗಳು ಯಾರಿಗೆ ಬೇಕಾದರು ಬರಬಹುದು. ಬಂದಂತಹ ಸಂದರ್ಭದಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಮಾತನಾಡಬೇಕು. ಉಚಿತ ಮಾನಸಿಕ ಆರೋಗ್ಯ ಸಹಾಯವಾಣಿ ಟೆಲಿಮನಸ್ 14416ಕ್ಕೆ ಕರೆ ಮಾಡಿ ಮಾತನಾಡಬಹುದು ಎಂದು ತಿಳಿಸಿದರು.



ಜಿಲ್ಲಾ ಶಸ್ತ್ರಚಿಕಿತ್ಸ ಡಾ. ಜಿ.ಎಸ್. ನಾಗಪ್ಪ ಮಾತನಾಡಿ, ನೈಸರ್ಗಿಕ ವಿಕೋಪಗಳು ಹಾಗೂ ತುರ್ತು ಪರಿಸ್ಥಿತಿಗಳ ಸಂದರ್ಭಗಳಲ್ಲಿ ತೊಂದರೆಗೊಳಗಾದವರಿಗೆ ಮಾನಸಿಕ ಬೆಂಬಲ ಅತ್ಯವಶ್ಯಕವಾಗಿರುತ್ತದೆ ಎಂದು ತಿಳಿಸಿದರು.

ಹಿಮ್ಸ್ ಪ್ರಾಂಶುಪಾಲ ಡಾ. ಬಿ.ಸಿ. ರವಿಕುಮಾರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತಿವೆ. ಅದರಲ್ಲಿ ಕೇವಲ ಶೇ. 30ರಷ್ಟು ಜನರು ಚಿಕಿತ್ಸೆಯನ್ನು ಪಡೆಯುತ್ತಿದ್ದು ಉಳಿದವರು ಕಡೆಗಣಿಸುತ್ತಿದ್ದಾರೆ. ಹಾಗಾಗಿ ಜನರಿಗೆ ಅದರ ಬಗ್ಗೆ ಸಾಕಷ್ಟು ಅರಿವು ಮೂಡಿಸುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಹಾಸನ ಮನೋವೈದ್ಯಕೀಯ ವಿಭಾಗದ ಮನೋರೋಗ್ಯತಜ್ಞ ಡಾ. ಸಂತೋಷ್ ಮಾತನಾಡಿ, ಸಾರ್ವಜನಿಕರು ಕೇವಲ ದೈಹಿಕ ಖಾಯಿಲೆಗಳ ಬಗ್ಗೆ ಗಮನ ನೀಡುತ್ತಾರೆ. ಅವರ ಮನಸ್ಸಿಗೆ ಸಂಬಂಧಿಸಿದ ಸಾಮಾನ್ಯ ಮಾನಸಿಕ ಖಾಯಿಲೆಗಳಾದ ಖಿನ್ನತೆ, ಆತಂಕ, ಗೀಳು ಖಾಯಿಲೆಗಳು ಇವುಗಳ ಬಗ್ಗೆ ಗಮನ ನೀಡುವುದಿಲ್ಲ. ನಂತರದಲ್ಲಿ ಉಲ್ಬಣಗೊಂಡು ತೀವ್ರ ತರಹದ ಮಾನಸಿಕ ಖಾಯಿಲೆಗಳಾದ ಸ್ಕಿಜೋಫ್ರೇನಿಯಾ, ಅತಿಯಾದ ಸಂತೋಷ, ಅತಿಯಾದ ಸಂಶಯ, ವಿಚಿತ್ರವಾಗಿ ವರ್ತಿಸುವುದು ಹಾಗೂ ಉನ್ಮಾದಕ್ಕೆ (ಮೇನಿಯಾ) ಒಳಗಾಗುತ್ತಾರೆ. ಈ ಎಲ್ಲಾ ಖಾಯಿಲೆಗಳಿಗೂ ಉಚಿತ ಚಿಕಿತ್ಸೆ ಲಭ್ಯವಿದ್ದು, ಸಾರ್ವಜನಿಕರು ಅದರ ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಚೇರಿ ಉದ್ಘಾಟನೆ: ಇದೇ ವೇಳೆ ಹಿಮ್ಸ್ ಭೋದಕ ಆಸ್ಪತ್ರೆಯ ಮನೋವೈದ್ಯಕೀಯ ವಿಭಾಗದಲ್ಲಿ ನೂತನವಾಗಿ ಆರಂಭಗೊಂಡಿರುವ ಒಟಣಚಿಟ ಊಚಿಟಣ ಖತಿ ಃಚಿಡಿಜ ಔಜಿಜಿಛಿ (ಒಊಖಃ) ಮಾನಸಿಕ ಆರೋಗ್ಯ ವಿಮರ್ಶನಾ ಮಂಡಳಿ ಕಚೇರಿಯನ್ನು1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಮಾನಸಿಕ ಆರೋಗ್ಯ ವಿಮರ್ಶನಾ ಮಂಡಳಿಯಅಧ್ಯಕ್ಷರಾದಶೈಲ ಬಿ.ಎಂಅವರುಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಹಿಮ್ಸ್‌ನ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ಹಾಜರಿದ್ದರು.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-12

1279: ಜಪಾನ್‌ನಲ್ಲಿ ನಿಚಿರೇನ್ ಶೋಶು ಬೌದ್ಧ ಸಮುದಾಯ ಸ್ಥಾಪನೆ.
1492: ಕ್ರಿಸ್ಟೋಫರ್ ಕೊಲಂಬಸ್ ತನ್ನ ಮೊದಲ ಅನುಭವದಲ್ಲಿ ಕೆರಿಬಿಯನ್ ಸಮುದ್ರದ ಒಂದು ದ್ವೀಪ ತಲುಪಿದಳು ಎಂದು ಧಾರಣೆ ಮಾಡಲಾಯಿತು.
1504: ಸ್ಪೇನಿನ ರಾಣಿ ಇಸಾಬೆಲ್ಲಾ ತನ್ನ ಕೊನೆಯ ಇಚ್ಛಾಪತ್ರವನ್ನು ಹೊಂದಿದರು.
1518: ಪಾಪಲ್ ರಾಯಭಾರಿ, ಕಾರ್ಡಿನಲ್ ಥಾಮಸ್ ಕಜೆಟನ್ ಆಗ್ಸ್ಬರ್ಗ್‌ನಲ್ಲಿ ಮಾರ್ಟಿನ್ ಲೂಥರ್ ಅವರಿಗೆ ತನಿಖೆ ನಡೆಸಿದರು.
1609: ಥ್ರೀ ಬ್ಲೈಂಡ್ ಮೈಸ್ ಎಂಬ ಮಕ್ಕಳ ರೀಮ್ ಅಂದ್ರೆ ಹಾಡು ಲಂಡನ್‌ನಲ್ಲಿ ಪ್ರಕಟವಾಯಿತು.
1811: ಪ್ಯಾರಗ್ವೇ ತನ್ನ ಸ್ವಾತಂತ್ರ್ಯವನ್ನು ಘೋಷಿಸಿದ ದಿನ.
1822: ಬ್ರೆಜಿಲ್ ಪೋರ್ಚುಗಲ್‌ನಿಂದ ಸ್ವಾತಂತ್ರ್ಯ ಪಡೆಯಿತು.
1900: ಯುಎಸ್ ನೌಕಾಪಡೆ ಮೊದಲ ಸಬ್‌ಮರಿನ್ ಅನ್ನು ಆಯೋಜಿಸಿತು.
1915: ಲೊಕ್ಷಿಣ್, ಬ್ರಿಟೀಷ್ ನರ್ಸ್, ಬೆಲ್ಜಿಯಮ್‌ನಲ್ಲಿ ನ್ಯಾಯವಚನಕ್ಕೆ ಸಹಾಯ ಮಾಡಿದ ಕಾರಣಕ್ಕೆ ಜರ್ಮನ್‌ರಿಂದ ದಂಡಿಸಲ್ಪಟ್ಟರು.
1968: ಇಕ್ವೇಟೋರಿಯಲ್ ಗಿನಿಯಾ ಸ್ಪೇನ್‌ನ ವಶದಿಂದ ಮುಕ್ತ ಸಂಪ್ರದಾಯದಿಂದ ಸ್ವಾತಂತ್ರ್ಯ ಪಡೆಯಿತು.
2000: ಯೆಮೆನ್‌ನ ಏಡಾನ್ ಬಂದುವಿನಲ್ಲಿ ಯು.ಎಸ್. ನೌಕಾಪಡೆ ಮೇಲೆ ಭಯೋತ್ಪಾದಕ ದಾಳಿ ನಡೆಸಿ 17 ಕರ್ಮಚಾರಿಗಳು ಮೃತಪಟ್ಟರು.
2002: ಬಾಲಿ ದ್ವೀಪದ ರಾತ್ರಿಕ್ಲಬ್ ಮೇಲೆ ಬೊಂಬು ದಾಳಿ ಸುಮಾರು 202 ಜನರು ಮೃತಪಟ್ಟರು.

### ಜನನ

1857: ಲ್ಯೂಚಿಯಾನೊ ಪವಾರೊಟಿ, ಹೊಸ ಶಕ್ತಿಯ ಟೊಂಪೊರಲ್
1537: ಎಡ್ವರ್ಡ್, ಇಂಗ್ಲೆಂಡ್ ರಾಜ
1798: ಪೆಡ್ರೋ ಬ್ರೆಜಿಲ್, ಪೋರ್ಚುಗಲ್ ರಾಜ
1912: ಮುಹಮ್ಮದ್ ಶಮ್ಸುಲ್ ಹುಕ್, ಬಾಂಗ್ಲಾದೇಶದ ಶೈಕ್ಷಣಿಕ ಹಾಗೂ ನೀತಿ ಸಚಿವ
1935: ಲಿಯನ್ ಪವಾರೋಟ್ಟಿ ಇಟಲಿ ಹಾರ್ಮೋನಿಕ್
1968: ಹ್ಯೂ ಜಾಕ್‌ಮನ್, ಆಸ್ಟ್ರೇಲಿಯಾ ನಟ

### ಮರಣ

1915: ಎಡೀತ್ ಕ್ಯಾವೆಲ್, ಯುದ್ಧ ಕಾಲದಲ್ಲಿ ಕಾರ್ಯಾಚರಣೆಗಳಿಗೆ ನೆರವಾದ ಕಾರಣ ಕೊಲೆಯಾದರು
1997: ಜಾನ್ ಡೆನ್ವರ್, ಜನಪ್ರಿಯ ಗಾಯಕ
1999: ವಿಲ್ಟ್ ಚ್ಯಾಂಬರ್‌ಲಿನ್, ಅಮೆರಿಕನ್ ಬಾಸ್ಕೆಟ್‌ಬಾಲ್ ಸ್ಫೂರ್ತಿದಾಯಕ

# ಕಥೆಗಾರ ಡಾ. ಮೊಗಳ್ಳಿ ಗಣೇಶ್‌ಗೆ ಮರಣೋತ್ತರ ರಾಜ್ಯೋತ್ಸವ ನೀಡಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಸಾಹಿತಿ, ಕಥೆಗಾರ ದಿ. ಡಾ. ಮೊಗಳ್ಳಿ ಗಣೇಶ್ ಅವರಿಗೆ ರಾಜ್ಯ ಸರ್ಕಾರ ಮರಣೋತ್ತರವಾಗಿ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು ಎಂದು ಸಾಹಿತಿ ಸಿ.ಸುವರ್ಣ ಮನವಿ ಮಾಡಿದರು.

ನಗರದಲ್ಲಿ ದಲಿತ ಸಂಘರ್ಷ ಸಮಿತಿ ಹಾಗೂ ಡಾ. ಮೊಗಳ್ಳಿ ಗಣೇಶ್ ಸಾಹಿತ್ಯಾಭಿಮಾನಿಗಳ ವತಿಯಿಂದ ಆಯೋಜಿಸಿದ್ದ ಡಾ.ಮೊಗಳ್ಳಿ ಗಣೇಶ್ ಮತ್ತು ದೇವೇಂದ್ರ ಹೆಗ್ಗಡೆ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಡಾ. ಮೊಗಳ್ಳಿ ಗಣೇಶ್ ಅವರು ಅಕ್ಷರವನ್ನೇ ತಮ್ಮ ಅಸ್ತ್ರವಾಗಿಸಿಕೊಂಡು ಕಥೆ, ಕಾದಂಬರಿ, ಪ್ರಬಂಧ, ಸಂಶೋಧನ ಕೃತಿ, ಬೀದಿ ನಾಟಕ, ಕಾವ್ಯ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿ ಪ್ರಖ್ಯಾತಿಯನ್ನು ಗಳಿಸಿದ್ದು ಅವರ ಸಾಹಿತ್ಯ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರ ಮಟ್ಟದಲ್ಲಿ ಮನ್ನಣೆ ಪಡೆದಿದೆ. ಅವರ ಸಾಹಿತ್ಯ ಸೇವೆ ನಾಡಿಗೆ ಆಗಾಧವಾಗಿದೆ. ಸದಾ ಸಮಾಜ ಜಾತಿ ಧರ್ಮ ವರ್ಣ ವ್ಯವಸ್ಥೆಯ ವಿರುದ್ಧ ಬೇಸರಗೊಂಡಿದ್ದರು. ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್, ದೇವನೂರು ಮಹಾದೇವ್, ಸಿದ್ದಲಿಂಗಯ್ಯ ಅವರ ಬರಹಗಳ ಬಗ್ಗೆ ಅಪಾರವಾದ ಪ್ರೀತಿ ಇತ್ತು. ಇವರು ಸ್ವಾಭಿಮಾನಿ ಮಾತು ಮೆದುವಾದರು ಬಹಳ ಅರ್ಥಗರ್ಭಿತವಾಗಿರುತ್ತಿತ್ತು ಎಂದರು.

ಹಿರಿಯ ದಲಿತ ಹೋರಾಟಗಾರ ಕೃಷ್ಣದಾಸ್ ಮಾತನಾಡಿ, ಡಾ.ಮೊಗಳ್ಳಿ ಗಣೇಶ್ ಅವರು ತಾವು ಮೈಸೂರು ಮಾನಸ ಗಂಗೋತ್ರಿಯಲ್ಲಿ ಎಂ.ಎ. ಓದುತ್ತಿದ್ದಾಗ ಅವರ ಒಡನಾಟದ ಬಗ್ಗೆ ನೆನಪುಗಳನ್ನು ಮೆಲುಕು ಹಾಕುತ್ತಾ ಡಾ. ಮೊಗಳ್ಳಿ ಗಣೇಶ್ ನೇರ ನುಡಿಯುಳ್ಳವರು. ಅವರ ವಿಮರ್ಶಾಕೃತಿ ತಕರಾರು ಇಡೀ ಸಾಹಿತ್ಯ ಲೋಕವನ್ನೇ ಅವರತ್ತ ನೋಡುವಂತೆ ಮಾಡಿದವರು ಮೊಗಳ್ಳಿಯವರು. ತಾವು ಅನುಭವಿಸಿದ ನೋವು ಸಂಕಟವನ್ನೇ ಕಥೆಯಲ್ಲಿ ಅಭಿವ್ಯಕ್ತಿಸಿ ದಲಿತ ಲೋಕವನ್ನುಇಡೀ ನಾಡಿಗೆ ಪರಿಚಯಿಸಿ ಶ್ರೇಷ್ಠ ಕಥೆಗಾರರಾಗಿದ್ದಾರೆ. ಅವರ ಸಾಹಿತ್ಯಕ್ಕೆ ಸಿಕ್ಕ ಬೇಕಾದ ಮನ್ನಣೆ ಸಿಕ್ಕದೆ ಇರುವುದು ನೋವಿನ ಸಂಗತಿ. ಸರ್ಕಾರ ಈಗಲಾದರೂ ಅವರಿಗೆ ಮರಣೋತ್ತರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಲಿ ಎಂದು ಆಗ್ರಹಿಸಿದರು.

ಇನ್ನು 84ರ ದಶಕದಲ್ಲಿಯೇ ದಲಿತ ಚಳವಳಿಯ ಮುಂಚೂಣಿಯ ನಾಯಕರಾದ ಬುದ್ದ ಘೋಷ ದೇವೇಂದ್ರ ಅವರು ನಮ್ಮನು ಅಗಲಿಸುವುದು ನೋವಿನ ಸಂಗತಿ. ಇವರು ಕೂಡ ವಿದ್ಯಾರ್ಥಿ ದಿಸೆಯಿಂದಲೇ ಹೋರಾಟ ಮಾಡುತ್ತಾ ಬಂದವರು. ಕಳೆದ 10 ವರ್ಷಗಳಿಂದ ಬುದ್ದ ಧಮ್ಮ ಪ್ರಚಾರಕ್ಕರಾಗಿ ಕೆಲಸ ಮಾಡುತ್ತಿದ್ದರು. ಇವರ ಹೋರಾಟಗಳು ನಮಗೆ ನಿಜಕ್ಕೂ ಸ್ಫೂರ್ತಿಯಾಗಿವೆ ಎಂದರು.

ದೇವೆಂದ್ರ ಅವರು ಅಪ್ಪಟ್ಟ ಅಂಬೇಡ್ಕರ್‌ವಾದಿಯಾಗಿ ತಳ ಸಮುದಾಯವನ್ನು ಜಾಗೃತಿಗೊಳಿಸುವ ಕೆಲಸ ಮಾಡುತ್ತಿದ್ದರು. ಇವರ ನಿಧನ ನಮಗೆ ತುಂಬಲಾರದ ನಷ್ಟ ಉಂಟು ಮಾಡಿದೆ ಎಂದು ಇವರ ಹೋರಾಟಗಳ ಬಗ್ಗೆ ನೆನಪಿಸಿಕೊಂಡರು. ಎಸ್ಸಿ-ಎಸ್ಟಿ ನಿವೃತ್ತ ಅಧಿಕಾರಿಗಳ ಸಂಘದ ಅಧ್ಯಕ್ಷ ಕಾಳಯ್ಯ, ಚಿಂತಕರು, ಪ್ರಾಧ್ಯಾಪಕ ಪ್ರೊ. ಕೃಷ್ಣ ಅತ್ತಿ, ಅಂತಾರಾಷ್ಟ್ರೀ ಚಿತ್ರಕಲಾವಿದ ಕೆ.ಟಿ.ಶಿವಪ್ರಸಾದ್ ಇತರರಿದ್ದರು.

# ಸ್ಥಳೀಯರಿಗೆ ಪ್ರವೇಶ ಕಲ್ಪಿಸದಿದ್ದರೆ ಪ್ರತಿಭಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಶಕ್ತಿದೇವತೆ ಹಾಸನಾಂಬ ಹೆಸರಿನಲ್ಲಿ ಕೊಳ್ಳೆ ಹೊಡೆಯುತ್ತಿರುವ ಅಧಿಕಾರಿಗಳು ಕಾಂಗ್ರೆಸ್ ಜಾತ್ರೆಯಾಗಿ ಪರಿವರ್ತಿಸಿದ್ದಾರೆ. ಸ್ಥಳೀಯರಿಗೆ ಸುಲಭ ದರ್ಶನಕ್ಕೆ ಅವಕಾಶ ಮಾಡಿಕೊಡದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೀಶ್ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿಷ್ಟಾಚಾರ ಕಟ್ಟುನಿಟ್ಟಾಗಿ ಪಾಲಿಸುತ್ತೇವೆ. ಗಣ್ಯರ ಜೊತೆಗೆ ನಾಲ್ಕಕ್ಕಿಂತ ಹೆಚ್ಚು ಜನರನ್ನು ಒಳಗೆ ಬಿಡುವುದಿಲ್ಲ ಎಂದಿದ್ದ ಜಿಲ್ಲಾಧಿಕಾರಿ ಗುರುವಾರ ಕಾಂಗ್ರೆಸ್ ಕಾರ್ಯಕರ್ತರನ್ನು ಬಿಟ್ಟುಕೊಂಡಿದ್ದರು. ಅಧಿಕಾರಿಗಳು ದುಡ್ಡು ಮಾಡುವುದನ್ನೇ ಕಾಯಕವಾಗಿಸಿಕೊಂಡಿದ್ದಾರೆ. ಕೆ.ಎಸ್. ಲತಾಕುಮಾರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿಕೊಳ್ಳುವುದು ಒಳ್ಳೆಯ ಕೆಲಸ ಎಂದು ಟೀಕಿಸಿದರು.

ಹಾಸನಾಂಬ ದರ್ಶನಕ್ಕೆ ಸ್ಥಳೀಯರಿಗೆ ಸ್ಥಳೀಯರಿಗೆ ಅವಕಾಶ ನೀಡದಿದ್ದರೆ ಅ. 15 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು. ಜಿಲ್ಲಾಡಳಿತಕ್ಕೆ ಇನ್ನೂ ಮೂರು ದಿನ ಕಾಲಾವಕಾಶ ನೀಡುತ್ತೇನೆ. ಸ್ಥಳೀಯರಿಗೆ ಪ್ರಾಧ್ಯಾನತೆ ನೀಡದಿದ್ದರೆ ಹತ್ತು ಸಾವಿರ ಜನರೊಟ್ಟಿಗೆ ಪ್ರತಿಭಟನೆ ನಡೆಸುತ್ತೇನೆ ಎಂದು ಹೇಳಿದರು.

ಗುರುವಾರ ನಾವು ದೇಗುಲದ ಮುಂದೆ ಪ್ರತಿಭಟನೆ ನಡೆಸಿದರೂಯಾಕೆ ಪ್ರತಿಭಟನೆ ಮಾಡುತ್ತಿದ್ದೀರಾ ಎಂದು ಕೇಳುವ ಸೌಜನ್ಯ ಜಿಲ್ಲಾಧಿಕಾರಿಗೆ ಇಲ್ಲ. ಹಾಸನಾಂಬ ಜಾತ್ರಾ ಮಹೋತ್ಸವದ ಎಲ್ಲಾ ಕಾಮಗಾರಿಗಳ ಟೆಂಡರ್ ಮಾರಾಟ ಮಾಡಿ ಚಿನ್ನ, ಬೆಳ್ಳಿ ಪದಕ ಉಡುಗೊರೆ ಪಡೆದಿದ್ದಾರೆ. ಟೆಂಡರ್ ಮಾರಾಟ ಮಾಡುವುದಕ್ಕಾಗಿಯೇ ಉಪವಿಬಾಗಾಧಿಕಾರಿ ಮಾರುತಿ ಅವರನ್ನು ಇಟ್ಟುಕೊಂಡಿದ್ದಾರೆ. ಮಾರುತಿ ಅವರಿಗೆ ವರ್ಗಾವಣೆಯಾಗಿದ್ದರೂ ಅವ್ಯವಹಾರಕ್ಕಾಗಿಯೇ ಮುಂದುವರಿದಿದ್ದಾರೆಂದು ದೂರಿದರು.

ಪಕ್ಷದ ಆನಂದ್, ಮಂಜುನಾಥ್, ಪಂಕಜ ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248